**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಂಡೂರು**
**ಸಿ.ಸಿ. ನಂ: 378/2021**

| | | | |
|---|---|---|---|
| **ಸಾಕ್ಷಿದಾರರ ಹೆಸರು** | **:** | **ಗುರುಸಿದ್ದನಗೌಡ** | **ಪಿ.ಡಬ್ಲ್ಯೂ-06** |
| **ತಂದೆಯ ಹೆಸರು** | **:** | **ಮರಳನಗೌಡ** | **ಸಿ.ಡಬ್ಲ್ಯೂ-10** |
| **ವಯಸ್ಸು** | **:** | **63 ವರ್ಷ** | |
| **ಉದ್ಯೋಗ** | **:** | **ವಕೀಲರು** | **ಸಾಕ್ಷಿಗೆ ಪ್ರಮಾಣ ವಚನ ಭೋದಿಸಿದ ದಿನಾಂಕಃ 11.02.2026.** |
| **ವಾಸಸ್ಥಳ** | **:** | **ಕೂಡ್ಲಿಗಿ** | |

**ಸಾಕ್ಷಿಯ ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ನನಗೆ ಚಾಸಾ 1 ಮತ್ತು 8 ರವರು ಪರಿಚಯ. ದಿಃ24.07.2021 ರಂದು ಮಃ2.30 ಗಂಟೆಗೆ ನಾನು ಕೂಡ್ಲಿಗಿ ಸಂಡೂರು ರಸ್ತೆಯಲ್ಲಿ ನಿಂತಿರುವಾಗ ಚಾಸಾ 8 ಮತ್ತು ನಾಗರಾಜ ಎನ್ನುವವರು ಬೈಕ್ ನಲ್ಲಿ ಸಂಡೂರು ಕಡೆಗೆ ಹೋಗುತ್ತಿದ್ದರು. ಅವರು ವಾಹನ ನಿಲ್ಲಿಸಿ ಬಸವರಾಜ ಎನ್ನುವವರಿಗೆ ಅಪಘಾತ ಆಗಿದೆ ಎಂದು ತಿಳಿಸಿರುತ್ತಾರೆ. ಸದರಿ ಅಪಘಾತದಲ್ಲಿ ಬಸವರಾಜ ಎಂಬುವವರು ಮರಣ ಹೊಂದಿರುತ್ತಾರೆ ಎಂದು ತಿಳಿಸಿರುತ್ತಾರೆ. ಸದರಿ ಅಪಘಾತ ಲಾರಿ ಮತ್ತು ಬೈಕ್ ನ ನಡುವೆ ಅಗಿರುತ್ತದೆ. ನಾನು ಸ್ಥಳಕ್ಕೆ ಹೋಗಿ ನೋಡಿದಾಗ ಲಾರಿ ನಂಃಕೆಎ-35-ಸಿ-6141 ಇರುತ್ತದೆ. ಬೈಕ್ ನಂಃಕೆಎ-35-ಇಬಿ-8793 ಆಗಿರುತ್ತದೆ. ಸದರಿ ಅಪಘಾತವು ಬಂಡ್ರಿ ಮಾರಮ್ಮನ ದೇವಸ್ಥಾನದ ಬಳಿ ಆಗಿರುತ್ತದೆ. ಈ ಬಗ್ಗೆ ನನು ಪೊಲೀಸ್‌ರ ಮುಂದೆ ಹೇಳಿಕೆ ನೀಡಿರುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರಃ ಶ್ರೀ ಎಸ್.ಯು.ಎನ್ ವಕೀಲರಿಂದ.**

ನಾನು ನನ್ನ ಹೇಳಿಕೆಯನ್ನು ದಿಃ24.07.2021 ರಂದು ನೀಡಿರುತ್ತೇನೆ. ನಾನು ಈ ದಿನದಂದು ಹೇಳಿಕೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಅಪಘಾತವನ್ನು ಕಾಣ್ಣಾರೆ ನೋಡಿರುವುದಿಲ್ಲ. ಅಪಘಾತ ಯಾರ ತಪ್ಪಿನಿಂದ ಆಗಿರುತ್ತದೆ ಎಂದು ನನಗೆ ಮಾಹಿತಿ ಇಲ್ಲ. ಆರೋಪಿಯನ್ನು ಇದೇ ಮೊದಲ ಬಾರಿಗೆ ನ್ಯಾಯಾಲಯದಲ್ಲಿ

ನೋಡುತ್ತಿದ್ದೇನೆ ಎಂದರೆ ಸರಿ. ಮೃತರ ಕುಟುಂಬದವರು ಪರಿಹಾರ ಕೋರಿ ಬಳ್ಳಾರಿ ನ್ಯಾಯಾಲಯದಲ್ಲಿ ಪ್ರಕಾರಣ ದಾಖಲಿಸಿರುತ್ತಾರೆ ಎಂದರೆ ಸರಿ. ಅವರಿಗೆ ಅನಕುಲವಾಗಲು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ.ಹೇ.ಕೆ.ಸರಿ.ಇದೆ.**

**ಪ್ರ.ದ.ನ್ಯಾ.ದಂಡಾಧಿಕಾರಿಗಳು,**
**ಸಂಡೂರು.**